# ‘ನಿರ್ದೇಶನ ಬೇಡಪ್ಪ..’



‘ಕಥೆ ಹೇಳುವ ಇಚ್ಛೆ ಯಾರಿಗಿಲ್ಲ? ಎಲ್ಲರಿಗೂ ಇದೆ. ನಾವೂ ಎಷ್ಟೋ ಸಲ ನಿರ್ಮಾಪಕರ ಜತೆ ಕುಳಿತು ಕಥೆ ಹೇಳುತ್ತೇವೆ. ಆದರೆ ಅದನ್ನು ತೆರೆಯ ಮೇಲೆ ತರುವುದು ಬೇರೆಯೇ ವಿದ್ಯೆ. ನಿರ್ದೇಶಕನಾಗುವುದು ಎಂದರೆ ಸುಲಭದ ಕೆಲಸವಲ್ಲ. ಸಿನಿಮಾದ ಎಲ್ಲ ವಿಭಾಗಗಳ ಬಗ್ಗೆಯೂ ಚಿಂತಿಸುವ, ಅದನ್ನು ಸಮರ್ಥವಾಗಿ ತೆರೆಗೆ ತರುವ ಸಾಮರ್ಥ್ಯ ಇರಬೇಕು. ಅದು ನನಗೆ ಹೇಳಿಸಿದ ಕೆಲಸವಲ್ಲ..’

–ಇದು ಅಮಿತಾಭ್ ಬಚ್ಚನ್ ಸ್ಪಷ್ಟ ನುಡಿ. ತಮ್ಮ ಬ್ಲಾಗ್‌ನಲ್ಲಿ ಈ ಬಗ್ಗೆ ಅಮಿತಾಭ್ ಇತ್ತೀಚೆಗೆ ಅತ್ಯಂತ ಮುಕ್ತವಾಗಿ ಬರೆದುಕೊಂಡಿದ್ದಾರೆ.

‘ನೀವೇಕೆ ಸಿನಿಮಾ ನಿರ್ದೇಶನ ಮಾಡಬಾರದು ಎಂದು ನನ್ನನ್ನು ಬಹಳ ಜನ ಈಗಲೂ ಕೇಳುತ್ತಾರೆ. ನನ್ನ ಕೈಯಲ್ಲಿ ಆಗುವ ಕೆಲಸ ಮಾಡುತ್ತಿದ್ದೇನೆ. ಸಿದ್ಧಗೊಳ್ಳು, ಅಭಿನಯಿಸು, ಹೊರಟು ಬಿಡು– ಇದಿಷ್ಟೇ ನನಗೆ ಚೆನ್ನಾಗಿ ಗೊತ್ತಿರುವ ವಿದ್ಯೆ. ಅದನ್ನು ನಿಷ್ಠೆಯಿಂದ ಮಾಡುತ್ತಿದ್ದೇನೆ..’ ಎಂದಿದ್ದಾರೆ ಅಮಿತಾಭ್.

‘ಸಿನಿಮಾ ನಿರ್ದೇಶಕನ ಮಾಧ್ಯಮ ಎಂದು ಅದಕ್ಕೇ ಹೇಳುವುದು. ಒಂದು ಸಿನಿಮಾ ಹಿಟ್ ಆಯಿತೆಂದರೆ ಅದರ ಬಹುದೊಡ್ಡ ಪಾಲು ನಿರ್ದೇಶಕರದ್ದೇ. ನಮ್ಮ ಉದ್ಯಮ ಅದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದೂ ಅಮಿತಾಭ್ ಬರೆದಿದ್ದಾರೆ.

ಅಮಿತಾಭ್ ನಿರ್ಮಾಪಕರಾಗಿ 12 ವರ್ಷಗಳಾದವು. ನಿರ್ದೇಶಕನಾಗಬೇಕೆಂಬ ಒತ್ತಡಕ್ಕೆ ಅವರು ಮಣಿದಿಲ್ಲ. ಕಳೆದ ವರ್ಷ ಅವರ ‘ಪಾ’ ಸಿನಿಮಾಕ್ಕೆ ಅದ್ಭುತ ಪ್ರತಿಕ್ರಿಯೆ ಸಿಕ್ಕಿದೆ. ಪ್ರಶಸ್ತಿಗಳೂ ಸಿಕ್ಕಿವೆ. 2010ರ ಆರಂಭದಲ್ಲೇ ಅವರು ನಟಿಸಿರುವ ರಣ್ ಮತ್ತು ತೀನ್‌ಪತ್ತಿ ಬಿಡುಗಡೆಗೆ ಸಿದ್ಧವಾಗಿವೆ.

# ‘ಸ್ಥಿತಪ್ರಜ್ಞ’ ಬಾಲ್ಕಿ

‘ಪಾ’ ಚಿತ್ರ ನಿರ್ದೇಶಿಸಿದ ಬಳಿಕ ನಿರ್ದೇಶಕ ಆರ್. ಬಾಲ್ಕಿಯ ಬಾಲಿವುಡ್ ಬೇಡಿಕೆ ಇನ್ನಷ್ಟು ಹೆಚ್ಚಾಗಿದೆ. ಹಿಂದೆ ‘ಚೀನೀ ಕಮ್’ ಚಿತ್ರ ಬಂದಾಗಿನದ್ದಕಿಂತ ಇದು ಒಂದು ತೂಕ ಹೆಚ್ಚೇ. ಆದರೆ ’ಸ್ಕ್ರೀನ್’ ಚಿತ್ರ ಪ್ರಶಸ್ತಿಯಲ್ಲಿ ಪಾ ಚಿತ್ರಕ್ಕೆ ಹಾಗೂ ನಿರ್ದೇಶನಕ್ಕೆ ಪ್ರಶಸ್ತಿ ಸಿಗದೆ ಇದ್ದುದು ಬಾಲ್ಕಿಗೆ ಬೇಸರ ತಂದಿಲ್ಲವೆ?

‘ಇಲ್ಲ’ ಅಂತಾರೆ ಸ್ಥಿತಪ್ರಜ್ಞ ಬಾಲ್ಕಿ. ‘ತ್ರೀ ಈಡಿಯಟ್ ಚಿತ್ರಕ್ಕೆ ಅತ್ಯುತ್ತಮ ಚಿತ್ರ ಪ್ರಶಸ್ತಿ ಸಿಕ್ಕಿ, ಪಾ ಚಿತ್ರಕ್ಕೆ ಸಿಕ್ಕಿಲ್ಲ ಎಂದಾದರೆ ಅದರ ಅರ್ಥ ತ್ರೀ ಈಡಿಯಟ್ಸ್ ಚಿತ್ರವನ್ನು ಹೆಚ್ಚು ಜನ ನೋಡಿದ್ದಾರೆ. ನಾನೂ ಆ ಚಿತ್ರವನ್ನು ನೋಡಿ ಸಂತೋಷ ಪಟ್ಟಿದ್ದೇನೆ’ ಎನ್ನುತ್ತಾರೆ ಬಾಲ್ಕಿ.

ಅಂದ ಹಾಗೆ, ಬಾಲ್ಕಿ ಮುಂದಿನ ಚಿತ್ರಕ್ಕೂ ಅಮಿತಾಭ್ ನಾಯಕರಂತೆ. ಬಾಲ್ಕಿಯ ಪತ್ನಿ ಗೌರಿ ಶಿಂಧೆ ಚಿತ್ರಕಥೆ ರೆಡಿ ಮಾಡುತ್ತಿದ್ದಾರಂತೆ. ‘ನಾಯಕಿ ಯಾರು? ದೀಪಿಕಾ ಪಡುಕೋಣೆ ಇರಬಹುದೆ?’ ಎಂದು ಪತ್ರಕರ್ತರು ಕೇಳಿದರೆ, ‘ಯಾಕಾಗಬಾರದು?’ ಎಂದು ಮರುಪ್ರಶ್ನೆ ಹಾಕಿ ಬಾಲ್ಕಿ ಹೊಸ ಕುತೂಹಲ ಮೂಡಿಸಿದ್ದಾರೆ!

■ ಬಿಂದು

# ಜೇಮ್ಸ್‌ಬಾಂಡ್ ತ್ರೀ ಡಿ!

ಈವರೆಗಿನ ಜೇಮ್ಸ್ ಬಾಂಡ್ ಚಿತ್ರಗಳಿಗಿಂತ ಭಿನ್ನವಾಗಿ ತೆರೆಯ ಮೇಲೆ ಬರಲಿದೆ ಹೊಸ ಜೇಮ್ಸ್ ಬಾಂಡ್ ಚಿತ್ರ. ಅದಕ್ಕೆ ಕಾರಣ ಚಿತ್ರ ತ್ರೀ–ಡಿ ತಂತ್ರಜ್ಞಾನ ಬಳಸಿರುವುದು. ತೆರೆಯ ಮೇಲೆ ರೋಮಾಂಚಕ ಸಾಹಸ ದೃಶ್ಯಗಳನ್ನು ರೂಪಿಸುವುದರಲ್ಲಿ ಬಾಂಡ್ ಚಿತ್ರಗಳು ಹೆಸರುವಾಸಿ. ಅದಕ್ಕೊಂದು ಪರಂಪರೆಯೇ ಇದೆ. ಇದೀಗ ಅದೇ ಸಾಹಸಮಯ ದೃಶ್ಯಗಳು ತ್ರೀ ಡಿನಲ್ಲಿ ಬಂತೆಂದರೆ ಪ್ರೇಕ್ಷಕರು ಇನ್ನಷ್ಟು ಹುಚ್ಚೆದ್ದು ಥಿಯೇಟರಿಗೆ ಧಾವಿಸುವುದರಲ್ಲಿ ಸಂಶಯವಿಲ್ಲ.

ಈ ಹೊಸ ಬಾಂಡ್ ಚಿತ್ರದಲ್ಲೂ ಡೇನಿಯಲ್ ಕ್ರೇಗ್ ಹೀರೊ. ‘ಅಮೆರಿಕನ್ ಬ್ಯೂಟಿ’ ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ ಪಡೆದ ಸ್ಯಾಂ ಮೆಂಡಿಸ್ ನಿರ್ದೇಶನವಿದೆಯಂತೆ..



ಡೇನಿಯಲ್ ಕ್ರೇಗ್

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65